**ಕರ್ನಾಟಕ ವಿಧಾನ ಪರಿಷತ್**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 423 |
| ಸದಸ್ಯರ ಹೆಸರು | : ಡಾ:ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 12.12.2024 |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು. |

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಕಲಬುರಗಿ ಜಿಲ್ಲೆಯಲ್ಲಿರುವ ನಾರಾಯಣಪುರ ಜಲಾಶಯದ ಕೆಳಭಾಗದಲ್ಲಿ ಮೈಸೂರಿನ ಕೆ.ಆರ್.ಎಸ್. ಮತ್ತು ಆಲ್ಲಮಟ್ಟಿಯ ಬೃಂದಾವನ ಮಾದರಿಯ ಉದ್ಯಾನವನ ನಿರ್ಮಿಸುವ ಯೋಜನೆ ಯಾವ ಹಂತದಲ್ಲಿದೆ.</td><td rowspan="3">ನಾರಾಯಣಪುರ ಆಣೆಕಟ್ಟೆಯ ಪ್ರದೇಶದಲ್ಲಿ ಉದ್ಯಾನವನ ನಿರ್ಮಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದ್ದು, ಸುಮಾರು ರೂ.86.35 ಕೋಟಿ ಅಂದಾಜು ಮೊತ್ತದ PST (Project Screening Template) ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಡ್ರಿಪ್(DRIP–Dam Rehabilitation & Improvement Project) ಹಂತ–2 ರ ಸಹಾಯ ಧನದಡಿಯಲ್ಲಿ ರಾಜ್ಯ ಯೋಜನಾ ನಿರ್ವಹಣಾ ಘಟಕ, ಬೆಂಗಳೂರು (SPMU-State Project Monitoring Unit) ಮುಖೇನ ಕೇಂದ್ರ ಯೋಜನಾ ನಿರ್ವಹಣಾ ಘಟಕ, ನವದೆಹಲಿ (CPMU- Central Project Monitoring Unit)ಕ್ಕೆ ಸಲ್ಲಿಸಲಾಗಿತ್ತು. ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಲವು ಅವಲೋಕನಗಳೊಂದಿಗೆ ಮಾರ್ಪಾಡಿಸಿ ಮರು ಸಲ್ಲಿಸಲು ಸೂಚಿಸಲಾಗಿರುತ್ತದೆ.<br><br>ಮುಂದುವರೆದು, ಈ ಪ್ರಸ್ತಾವನೆಗೆ ಸಂಬಂಧಪಟ್ಟಂತೆ ಪ್ರವಾಸೋದ್ಯಮ ಘಟಕದ ವಿಸ್ತೃತ ಕಾರ್ಯ ಸಾಧ್ಯತೆ ಅಧ್ಯಯನವನ್ನು ನಡೆಸಿದ ನಂತರ ಹಾಗೂ ನಿರ್ದೇಶಕರು, ಕರ್ನಾಟಕ ಇಂಜಿನೀಯರಿಂಗ್ ಸಂಶೋಧನಾ ಕೇಂದ್ರ(KERS), ಮಂಡ್ಯರವರಿಂದ ಪ್ರಸ್ತಾವನೆಗೆ ಸಂಬಂಧಪಟ್ಟಂತೆ ತಡೆಗೋಡೆ ನಿರ್ಮಾಣದ ಮೇಲೆ ಸ್ಪಿಲ್‌ವೇ ಡಿಸ್ಚಾರ್ಜ್‌ನ ಪ್ರವೇಶ ಕುರಿತು ಭೌತಿಕ ಮಾದರಿ ಅಧ್ಯಯನದ (Physical Model Study-Rs.1.20 Cr) ವರದಿಗಳನುಸಾರ ಪರಿಷ್ಕೃತ PST (Project Screening Template) ಪ್ರಸ್ತಾವನೆಯನ್ನು ಅಂದಾಜು ಮೊತ್ತದೊಂದಿಗೆ ಸಿದ್ಧಪಡಿಸಲಾಗಿದೆ. ನಿಯಮಾನುಸಾರ ಕೇಂದ್ರ ಯೋಜನಾ ನಿರ್ವಹಣಾ ಘಟಕ, ನವದೆಹಲಿ (CPMU-Central Project Monitoring Unit)ಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಸೂಕ್ತ ಅನುದಾನವನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.<br><br>ಪ್ರಸ್ತುತ, ನಾರಾಯಣಪುರ ಆಣೆಕಟ್ಟೆಯ ಪ್ರದೇಶದಲ್ಲಿ ಉದ್ಯಾನವನ ನಿರ್ಮಿಸುವ ವಿಸ್ತೃತ ಯೋಜನಾ (PST - Project Screening Template) ವರದಿಯನ್ನು ಹಾಗೂ ವಿಸ್ತೃತ ಕಾರ್ಯ ಸಾಧ್ಯತೆ ಅಧ್ಯಯನವನ್ನು ನಡೆಸಿ ವರದಿಯನ್ನು ತಯಾರಿಸಲು ಸಮಾಲೋಚಕರನ್ನು ನೇಮಿಸಲಾಗಿದ್ದು, ವಿವಿಧ ಹಂತದ ಪ್ರಗತಿಯಲ್ಲಿದೆ.</td></tr>
<tr><td>ಆ)</td><td>ಸದರಿ ಯೋಜನೆಯ ಸಂಕ್ಷಿಪ್ತ ವರದಿಯನ್ನು ತಯಾರಿಸಲಾಗಿದೆ. ಮತ್ತು ಇದಕ್ಕೆ ತಗಲು ವೆಚ್ಚ ಎಷ್ಟು?</td></tr>
<tr><td>ಇ)</td><td>ಎಂದಿನಿಂದ ಉದ್ಯಾನವನದ ಕಾಮಗಾರಿಯನ್ನು ಕೈಗೊಳ್ಳಲಾಗುವುದು ಅಥವಾ ಉದ್ಯಾನವನ್ನು ನಿರ್ಮಿಸುವ ಯೋಜನೆಯನ್ನು ಸರ್ಕಾರ ಕೈಬಿಟ್ಟಿದೆಯೇ: ಬಿಟ್ಟಿದಲ್ಲಿ ಯಾವ ಕಾರಣಕ್ಕೆ (ವಿವರ ನೀಡುವುದು)</td></tr>
<tr><td>ಈ)</td><td>ಕಾರಂಜಾ, ಬೆಣ್ಣೆತೋರಾ, ಮುಲ್ಲಾಮಾರಿ ಜಲಾಶಯಗಳ ಕೆಳಭಾಗದಲ್ಲಿ ಇಂಥಹ ಉದ್ಯಾನಗಳನ್ನು ನಿರ್ಮಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ.?</td><td>ಬೀದರ್ ಜಿಲ್ಲೆ, ಭಾಲ್ಕಿ ತಾಲ್ಲೂಕಿನ ಬ್ಯಾಲಹಳ್ಳಿ ಗ್ರಾಮ ಹತ್ತಿರವಿರುವ ಕಾರಂಜಾ ಜಲಾಶಯವನ್ನು ಉನ್ನತ ದರ್ಜೆಯ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸುವ ಮೊದಲನೆ ಹಂತದ ರೂ.32.23 ಕೋಟಿ ಮೊತ್ತದ ಪರಿಷ್ಕೃತ ಅಂದಾಜು ಪಟ್ಟಿಯು ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದೆ.<br><br>ಪ್ರಸ್ತುತ, ಬೆಣ್ಣೆತೋರಾ ಮತ್ತು ಮುಲ್ಲಾಮಾರಿ ಜಲಾಶಯದ ಕೆಳಭಾಗದಲ್ಲಿ ಉದ್ಯಾನಗಳನ್ನು ನಿರ್ಮಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.</td></tr>
</table>

ಸಂಖ್ಯೆ: ಜಸಂಇ 86 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)

ಉಪ ಮುಖ್ಯಮಂತ್ರಿಗಳು